# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1281 |
| ಸದಸ್ಯರ ಹೆಸರು | : | ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 17.03.2021 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ಪೌತಿ ಖಾತೆ ಆಂದೋಲನವನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗ ನಡೆಸಲಾಗಯಿತು ಇದರ ಫಲಶೃತಿ ಏನು ಹಾಗೂ ಇದನ್ನು ಪ್ರತಿ ವರ್ಷಕ್ಕೊಮ್ಮೆ ಕಡ್ಡಾಯವಾಗಿ ನಡೆಸಲು ಸರ್ಕಾರದ ತೀರ್ಮಾನಗಳೇನು; (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್‌ಎಂ 2019(ಇ) ದಿನಾಂಕ:17.10.2020 ರಲ್ಲಿ ಪೌತಿ/ ವಾರಸಾ ಖಾತೆ ಆಂದೋಲನ ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br><br>ಅದರಂತೆ ರಾಜ್ಯಾದ್ಯಂತ ಪೌತಿ ಆಂದೋಲನವು ದಿನಾಂಕ:28.10.2020ರಿಂದ ಪ್ರಾರಂಭವಾಗಿದೆ. ದಿನಾಂಕ:09.03.2021ರವರೆಗೆ 10024 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳ ವಿಲೇವಾರಿಗೆ ಮಾಡಲು ಕ್ರಮವಹಿಸಲಾಗಿರುತ್ತದೆ. ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಈ ಪೌತಿ ಆಂದೋಲನ ಪ್ರಕ್ರಿಯೆಯು ಕಂದಾಯ ಇಲಾಖೆಯ ನಿರಂತರ ಕ್ರಿಯಾಯೋಜನೆಯಾಗಿರುತ್ತದೆ. |
| ಆ. | ಈ ಪೌತಿ ಖಾತೆ ಆಂದೋಲನದಲ್ಲಿ ಕೊಡಗು ಜಿಲ್ಲೆಯಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಇದರಲ್ಲಿ ವಿಲೇಯಾದ ಅರ್ಜಿಗಳ ಸಂಖ್ಯೆ ಉಳಿಕೆ ಅರ್ಜಿಗಳ ಸಂಖ್ಯೆ ಉಳಿಯಲು ಕಾರಣವೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | ಕೊಡಗು ಜಿಲ್ಲೆಯಲ್ಲ ಒಟ್ಟು 1136 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 538 ಅರ್ಜಿಗಳು ವಿಲೇವಾರಿಯಾಗಿರುತ್ತವೆ. ತಂತ್ರಾಂಶದ ಅಡಚಣೆಯಿಂದಾಗಿ ಮತ್ತು ಕೆಲವು ಪ್ರಕರಣಗಳಲ್ಲಿ ದಾಖಲೆಗಳ ಅಲಭ್ಯತೆಯಿಂದ ಬಾಕಿ ಉಳಿದಿರುವ 598 ಅರ್ಜಿಗಳ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ. |
| ಇ. | ಈ ಪೌತಿ ಖಾತೆ ಅಂದೋಲನದ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಲು ತೆಗೆದುಕೊಂಡ ಕ್ರಮಗಳೇನು? | ದಿನಪತ್ರಿಕೆಗಳು ಮತ್ತು ಭಿತ್ತಿ ಪತ್ರಗಳ ಮೂಲಕ ಪ್ರಕಟಣೆ, ರೇಡಿಯೋ (ಆಕಾಶವಾಣಿ) ಮುಖಾಂತರ ಪ್ರಕಟಣೆ ಹಾಗೂ ಗ್ರಾಮಲೆಕ್ಕಿಗರು ಹಾಗೂ ಗ್ರಾಮ ಸಹಾಯಕರುಗಳಿಂದ ವ್ಯಾಪಕ ಪ್ರಚಾರ ಮಾಡಲಾಗಿರುತ್ತದೆ. |

ಸಂಖ್ಯೆ:ಆರ್‌ಡಿ 58 ಟಿಆರ್‌ಎಂ 2020

**(ಆರ್. ಅಶೋಕ)**
ಕಂದಾಯ ಸಚಿವರು